**ದಿನಾಂಕಃ 02-02-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎನ್.ಡಿ ವಕೀಲರಿಂದಃ**

ನಾನು ಬಿ ಎ ಪ್ರಥಮ ತರಗತಿಯಲ್ಲಿ ಒದುತ್ತಿದ್ದೆ. ಈಗ ಕಾಲೇಜಿಗೆ ಹೋಗಲು ಆಗುವುದಿಲ್ಲ. ಬೈಕು ನಂ.ಕೆ ಎ 17 ಹೆಚ್ ಬಿ 2700 ಈ ವಾಹನದ ಮಾಲೀಕರು ಎಂದರೆ ಕೃಷ್ಣೋಜಿರಾವ್ ರವರಿಗೆ ಸೇರಿತ್ತು. ಅಪಘಾತವಾದ ಸಮಯದಲ್ಲಿ ನಾವು ಮೋಟಾರು ಸೈಕಲ್ ನಲ್ಲಿ 3 ಜನರು ಹೋಗುತ್ತಿದ್ದೇವು ಎಂದರೆ ಸರಿಯಲ್ಲ. ನಾನು ಮತ್ತು ಆಕಾಶ ಹೋಗುತ್ತಿದ್ದೇವು. ಆಕಾಶ ಮೋಟಾರು ಸೈಕಲ್ ಚಲಾಯಿಸುತ್ತಿದ್ದನು. ಅಪಘಾತವು ಎರಡು ಮೋಟಾರು ಸೈಕಲ್ ಗಳ ನಡುವೆ ಮುಖಾ ಮುಖಿ ಡಿಕ್ಕಿಯಾಗಿರುತ್ತದೆ ಎಂದರೆ ಸರಿ. ಈ ಅಪಘಾತವು ರಸ್ತೆಯ ಮಧ್ಯಯ ಭಾಗದಲ್ಲಿ ಆಗಿದೆ ಎಂದರೆ ಸರಿ. ಅಪಘಾತವಾದ ನಂತರ ಪೋಲಿಸರು ನನ್ನನ್ನು ಬೇಟಿಯಾಗಿದ್ದಾರೇಯೇ ಎಂದರೆ ಇಲ್ಲ. ಆದರೆ ಅಪಘಾತವಾದ ದಿವಸ ಬಂದಿದ್ದರು.

2. ಬೈಕು ಚಲಾಯಿಸುತ್ತಿದ್ದ ಆಕಾಶಗೆ ಎನು ಗಾಯಗಳಾಯಿತು ಎಂದರೆ ಅವನು ಅಪಘಾತವಾದಾಗ ಬಿದ್ದಿದ್ದನು. ಕಾಲಿಗೆ ಗಾಯವಾಗಿತ್ತು. ನಾನು ಮತ್ತು ಆಕಾಶ ಇಬ್ಬರು ಸ್ನೇಹಿತರು ಎಂದರೆ ಸರಿ. ಅಪಘಾತವಾದ ನಂತರ ಇಲ್ಲಿಯವರೆಗೆ ಆಕಾಶ ನನ್ನನ್ನು ಬೇಟಿಯಾಗಿದ್ದಾನೆಯೇ ಎಂದರೆ ಇಲ್ಲ. ನಾನು ಸಹ ಬೇಟಿಯಾಗಿಲ್ಲ. ನನಗೆ ಬೈಕು ಚಲಾಯಿಸಲು ಚಾಲನಾ ಪ್ರಮಾಣ ಪತ್ರ ಇದೆಯಾ ಎಂದರೆ ಇಲ್ಲ. ಅಪಘಾತದ ಸಂಬಂದ ದೂರನ್ನು ಯಾರು ಕೊಟ್ಟಿದ್ದಾರೆ ಎಂದರೆ ನಾನು ಆಸ್ಪತ್ರೆಯಲ್ಲಿದ್ದೇನು. ನನಗೆ ಗೊತ್ತಿಲ್ಲ. ದೂರನ್ನು ಯಾರು ಕೊಟ್ಟಿದ್ದಾರೆ ಎಂದು ಕೇಳಿ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಇಲ್ಲ. ಅಪಘಾತವಾದ ಸಮಯದಲ್ಲಿ ನಾನೇ ಬೈಕು ಒಡಿಸುತ್ತಿದ್ದೇ ನನಗೆ ಡಿ ಎಲ್ ಇರಲಿಲ್ಲ ಎಂದರೆ ನಾನು ಬೈಕಿನಲ್ಲಿ ಹಿಂಬದಿ ಸವಾರನಾಗಿ ಹೋಗುತ್ತಿದ್ದೇನು. ನಾನು ಪರಿಹಾರ ಪಡೆಯುವ ಸಲುವಾಗಿ ಆಕಾಶನನ್ನು ಬೈಕು ಚಾಲಕ ಎಂದು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ.

3. ಅಪಘಾತವಾದ ತಕ್ಷಣ ನಾನು ಭದ್ರಾವತಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ಅಲ್ಲಿ ಪ್ರಥಮ ಚಿಕಿತ್ಸೆ ಕೊಟ್ಟು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಕಳುಹಿಸಿದ್ದರು. ನಂಜಪ್ಪ ಆಸ್ಪತ್ರೆಯಿಂದ ಪುನಃ ಉಡುಪಿಯ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಮಣಿಪಾಲ ಆಸ್ಪತ್ರೆಯಲ್ಲಿ ಹೆಚ್ಚಿನ ಖರ್ಚಾಗುತ್ತದೆ ಎಂದ ಕಾರಣ ಮಂಗಳೂರಿನ ಶ್ರೀನಿವಾಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಶ್ರೀನಿವಾಸ ಆಸ್ಪತ್ರೆಯಲ್ಲಿ ಎಷ್ಟು ದಿವಸ ಚಿಕಿತ್ಸೆ

ಪಡೆದಿದ್ದೀರಾ ಎಂದರೆ ಒಂದು ತಿಂಗಳು ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಶ್ರೀನಿವಾಸ ಆಸ್ಪತ್ರೆಯಲ್ಲಿ ಏನೇನು ಚಿಕಿತ್ಸೆ ಕೊಟ್ಟಿದ್ದಾರೆ ಎಂದರೆ ನನ್ನ ಬಲಕಾಲಿನ ತೊಡೆಯ ಮೂಳೆ, ಮೊಣಕಾಲಿನ ಮೂಳೆ ಹಾಗೂ ಪಾದದ ಹಿಂಬದಿಯ ಮೂಳೆ ಮುರಿದಿದ್ದು ಅದಕ್ಕೆ ಚಿಕಿತ್ಸೆ ಕೊಟ್ಟಿದ್ದಾರೆ. ಅದೇ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ಎಲ್ಲಾ ಗುಣ ಆದ ನಂತರ ಶ್ರೀನಿವಾಸ ಆಸ್ಪೆತ್ರೆಯಿಂದ ನನ್ನನ್ನು ಬಿಡುಗಡೆ ಮಾಡಿದ್ದಾರೆ. ಪುನಃ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

4. ನಾನು ಶ್ರೀನಿವಾಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಇತ್ತೀಚೆಗೆ ಮಂಗಳೂರಿನ ವೆನಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ವೆನ್ ಲಾಕ್ ಆಸ್ಪತ್ರೆ ಸರ್ಕಾರಿ ಆಸ್ಪತ್ರೆ ಎಂದರೆ ನಿಜ. ವೆನ್ ಲಾಕ್ ಆಸ್ಪತ್ರೆಯಲ್ಲಿ 2-3 ಆಪರೇಷನ್ ಮಾಡಿದ್ದಾರೆ. ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿದ್ದೇನೆ. ನಂತರ ನಾನು ರಾಣೇಬೆನ್ನೂರಿನ ಓಂ ಆಸ್ಪತ್ರೆಯಲ್ಲಿ ಹಾಗೂ ಹೊನ್ನಾಳಿಯ ಶ್ರೀ ದೇವಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಈ ಆಸ್ಪತ್ರೆಗಳಲ್ಲಿ ನನಗೆ ಯಾವುದೇ ಶಸ್ತ್ರಚಿಕಿತ್ಸೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಶ್ರೀನಿವಾಸ ಆಸ್ಪತ್ರೆ ಹಾಗೂ ವೆನ್ ಲಾಕ್ ಆಸ್ಪತ್ರೆಯಲ್ಲಿ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡಿ ಎಂದು ಕೇಳಿದಾಗ ನಿಮ್ಮ ಜಿಲ್ಲೆಯ ಆಸ್ಪತ್ರೆಯಲ್ಲಿ ಪಡೆದುಕೊಳ್ಳಿ ಎಂದು ಹೇಳಿದರು. ಅವರು ಎನು ಬರೆದುಕೊಟ್ಟಿಲ್ಲ.

5. ನನಗೆ ಯಾವುದೇ ರೀತಿಯ ಅಂಗನ್ಯೂನ್ಯತೆ ಇರುವುದಿಲ್ಲ. ಸುಳ್ಳು ದಾಖಲೆ ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತವಾದಾಗ ಎಷ್ಟು ವರ್ಷ ಆಗಿತ್ತು ಎಂದರೆ 19 ವರ್ಷ ಆಗಿತ್ತು. ನಾನು ಹಾಲುಮಾರಾಟದಿಂದ ಕೃಷಿ ಉತ್ಪನ್ನದಿಂದ ತಿಂಗಳಿಗೆ 35,000/- ರೂ.ಗಳನ್ನು ಸಂಪಾಧನೆ ಮಾಡುತ್ತಿದ್ದೇನೆ ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನಾನು ಆಸ್ಪತ್ರೆಯ ಖರ್ಚಿಗೆ 3,50,000/- ರೂ.ಗಳನ್ನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮೆಡಿಕಲ್ ಬಿಲ್ಲುಗಳನ್ನು ಹೆಚ್ಚಿನ ಪರಿಹಾರಕ್ಕೋಸ್ಕರ ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನನಗೆ ಇನ್ನು ಹೆಚ್ಚಿನ ಚಿಕಿತ್ಸೆ ಬೇಕು ಎಂದು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

6. ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಆಕಾಶನಿಗೆ ಬೈಕು ಚಲಾಯಿಸಲು ಡಿ ಎಲ್ ಇರಲಿಲ್ಲ ಎಂದರೆ ಇತ್ತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
(ಬಿ.ಸಿದ್ದರಾಜು)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.